**2 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ದೇವನಹಳ್ಳಿ**

**ಸಿ.ಸಿ ನಂ. 829/2017**

ಹೆಸರು : ಮಹೇಂದ್ರ ಕುಮಾರ್. ಕೆ ಹೆಚ್

ತಂದೆಯ ಹೆಸರು : ಕೆ ಬಿ ಹೊಳಿಯಪ್ಪ

ವಯಸ್ಸು : 41 ವರ್ಷ

ಉದ್ಯೋಗ : ಪೋಲಿಸ್ ಇನ್ಸ್ ಪೆಕ್ಟರ್, ಡಿ ಜಿ ಪಿ ಕಚೇರಿ

ವಾಸ : ಬೆಂಗಳೂರು

**PW-1, CW-1,**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 14-08-2025**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿರವರಿಂದಃ**

ನಾನು ದಿ. 24-09-2015 ರಿಂದ ದಿ. 14-07-2016 ರವರೆಗೆ ವಿಶ್ವನಾಥಪುರ ಪೊಲೀಸ್ ಠಾಣೆಯಲ್ಲಿ ಆರಕ್ಷಕ ಉಪನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ. 05-04-2016 ರಂದು ಬೆಳಿಗಿನ ಜಾವ 2.30 ಗಂಟೆಯ ಸಮಯದಲ್ಲಿ ನಾನು ವಿಶೇಷ ರಾತ್ರಿ ಗಸ್ತಿನಲ್ಲಿರುವಾಗ ಕೊಯಿರಾ ಕಡೆಯಿಂದ ಅಕ್ರಮವಾಗಿ ಟ್ರಾಕ್ಟರ್ ಗಳಲ್ಲಿ ಗ್ರಾವೇಲ್ ಮರಳನ್ನು ತುಂಬಿಕೊಂಡು ಕಳ್ಳತನದಿಂದ ಸಾಗಾಣಿಕೆ ಮಾಡುತ್ತಿದ್ದಾರೆಂದು ನನಗೆ ಬಂದ ಖಚಿತ ಮಾಹಿತಿ ಮೇರೆಗೆ ಠಾಣೆಗೆ ಪಂಚರಾದ ಚಾಸಾ-2 ರಿಂದ 4 ರವರನ್ನು ಬರಮಾಡಿಕೊಂಡು, ಸದರಿಯವರಿಗೆ ವಿಚಾರ ತಿಳಿಸಿ, ಸದರಿ ಪಂಚರು ಮತ್ತು ನಮ್ಮ ಠಾಣೆಯ ಸಿಬ್ಬಂದಿಯವರಾದ ಚಾಸಾ-5 ಮತ್ತು 6 ರವರ ಜೊತೆಯಲ್ಲಿ ನಮ್ಮ ಇಲಾಖ ವಾಹನ ಸಂಖ್ಯೆ ಕೆಎ-43-ಜಿ-16 ರಲ್ಲಿ ಠಾಣೆಯಿಂದ ಹೊರಟು ಚಿಕ್ಕಓಬದೇನಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಹೋಗುತ್ತಿರುವಾಗ ಚಿಕ್ಕಓಬದೇನಹಳ್ಳಿ ಗ್ರಾಮದ ಕಡೆಯಿಂದ ಎರಡು ಟ್ರಾಕ್ಟರ್ ಗಳು ಬರುತ್ತಿದ್ದು, ಸದರಿ ಟ್ರಾಕ್ಟರ್ ಚಾಲಕರು ನಮ್ಮ ಇಲಾಖಾ ವಾಹನ ನೋಡಿ ರಸ್ತೆ ಬದಿಯಲ್ಲಿ ಟ್ರಾಕ್ಟರ್ ಅನ್ನು ನಿಲ್ಲಿಸಿ ಓಡಿ ಹೋಗಿರುತ್ತಾರೆ. ಪಂಚರ ಸಮಕ್ಷಮ ಸದರಿ ಟ್ರಾಕ್ಟರ್ ಗಳನ್ನು ಟ್ರಾಕ್ಟರ್ ಮತ್ತು ಟ್ರಾಲಿಗಳನ್ನು ಅಜಮಾಹಿಸಿ ನೋಡಲಾಗಿ ಸದರಿ ಟ್ರಾಕ್ಟರ್ ಟ್ರಾಲಿಗಳಲ್ಲಿ ಗ್ರಾವೇಲ್ ಮರಳು ತುಂಬಿರುವುದು ಕಂಡುಬಂದಿರುತ್ತದೆ. ಸದರಿ ಟ್ರಾಕ್ಟರ್ ನ ನೊಂದಣಿ ಸಂಖ್ಯೆಯನ್ನು ನೋಡಲಾಗಿ 1. ಟ್ರಾಕ್ಟರ್ ನೊಂದಣಿ ಸಂಖ್ಯೆ ಕೆಎ-40-ಟಿ-5706 ಮತ್ತು ಟ್ರಾಲಿ ಸಂಖ್ಯೆ ಕೆಎ-40-ಟಿ-5707 ಆಗಿದ್ದು ಹಾಗೂ 2. ಟ್ರಾಕ್ಟರ್ ನೊಂದಣಿ ಸಂಖ್ಯೆ ಕೆಎ-43-ಟಿ-1100 ಮತ್ತು ಟ್ರಾಲಿ ಸಂಖ್ಯೆ ಕೆಎ-43-ಟಿ-1101 ಆಗಿರುತ್ತದೆ. ಸದರಿ

ಟ್ರಾಕ್ಟರ್ ಮತ್ತು ಟ್ರಾಲಿಗಳನ್ನು ಪಂಚರ ಸಮಕ್ಷಮ ಬೆಳಗಿನ ಜಾವ 3.00 ರಿಂದ 4.00 ವರೆಗೆ ಪಂಚನಾಮೆ ಕ್ರಮ ಜರುಗಿಸಿ, ಸದರಿ ಟ್ರಾಕ್ಟರ್ ಗಳನ್ನು ಮತ್ತು ಟ್ರಾಲಿಗಳನ್ನು ಮರಳು ಸಹಿತವಾಗಿ ನನ್ನ ವಶಕ್ಕೆ ಪಡೆದುಕೊಂಡಿರುತ್ತೇನೆ. ಸಾಕ್ಷಿಯು ಮಹಜರನ್ನು ಮತ್ತು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮಹಜರನ್ನು ನಿಪಿ-1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸದರಿ ವಶಪಡಿಸಿಕೊಂಡ ಟ್ರಾಕ್ಟರ್ ಮತ್ತು ಟ್ರಾಲಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಕಡತದಲ್ಲಿರುವ ಟ್ರಾಕ್ಟರ್ ಮತ್ತು ಟ್ರಾಲಿಗಳ ಎರಡು ಬಾವಚಿತ್ರವನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-2 ಮತ್ತು 3 ಎಂದು ಗುರುತಿಸಲಾಯಿತು.

3. ನಂತರ ಸದರಿ ಟ್ರಾಕ್ಟರ್ ಮತ್ತು ಟ್ರಾಲಿಗಳೊಂದಿಗೆ ಠಾಣೆಗೆ ಬೆಳಗಿನ ಜಾವ 4.15 ಗಂಟೆಗೆ ಬಂದು, ಈ ಬಗ್ಗೆ ಸೂಕ್ತ ಕಾನೂನು ಕ್ರಮ ಜರುಗಿಸಿರುವಂತೆ ಠಾಣಾಧಿಕಾರಿಯಾದ ಚಾಸಾ-7 ರವರಿಗೆ ಒಂದು ಜ್ಞಾಪನ ನೀಡಿರುತ್ತೇನೆ. ಸದರಿ ಅಕ್ರಮ ಮರಳು ಸಾಗಾಣಿಕೆ ಕುರಿತು ದೂರು ದಾಖಲಿಸುವಂತೆ ಕೋರಿ ಮತ್ತು ಸದರಿ ಮಹಜರು ಮತ್ತು ವಶಪಡಿಸಿಕೊಂಡ ವಾಹನಗಳನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ಸದರಿ ಜ್ಞಾಪನ ಮತ್ತು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಜ್ಞಾಪನವನ್ನು ನಿಪಿ-4 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಕೆ ಜಿ ಆರ್ ಆರೋಪಿತರ ಪರ ವಕೀಲರಿಂದ**

ನಾನು ಚಪ್ಪರದ ಕಲ್ಲು ಸರ್ಕಲ್ ಬಳಿ ಇದ್ದಾಗ ನನಗೆ ಮಾಹಿತಿ ಬಂದಿರುತ್ತದೆ. ನಿಪಿ-4 ರಲ್ಲಿ ವಿಶ್ವನಾಥಪುರ ಗ್ರಾಮದಲ್ಲಿ ಎಂದು ನಮೂದು ಇರುತ್ತದೆ ಎಂದರೆ ಸರಿ. ಚಪ್ಪರದ ಕಲ್ಲು ಸರ್ಕಲ್ ಮತ್ತು ವಿಶ್ವನಾಥಪುರ ಗ್ರಾಮಕ್ಕೆ ಸುಮಾರು 1 ಕಿ ಮೀ ಗಿಂತ ಹೆಚ್ಚಿ ನ ಅಂತರ ಇರುತ್ತದೆ ಎಂದರೆ ಸರಿಯಲ್ಲ. ಚಾಸಾ-2 ರಿಂದ 4 ರವರನ್ನು ನಮ್ಮ ಠಾಣೆಯ ಸಿಬ್ಬಂದಿಯವರು ಕರೆಸಿರುತ್ತಾರೆ. ಚಾಸಾ-2 ಮತ್ತು 4 ರವರು ಮಾಯಸಂದ್ರ ಗ್ರಾಮದವರು ಎಂದರೆ ಸರಿ. ಚಪ್ಪರದ ಕಲ್ಲು ಸರ್ಕಲ್ ನಿಂದ ಮಾಯಸಂದ್ರ ಗ್ರಾಮವು ಸುಮಾರು 4 ಕಿ ಮೀ ಗಿಂತ ಹೆಚ್ಚಿ ನ ಅಂತರ ಇರುತ್ತದೆ ಎಂದರೆ ಸರಿಯಲ್ಲ.ಹೆಚ್ಚಿ ನ ಅಂತರ ಇರುತ್ತದೆ ಎಂದರೆ ಸರಿ. ಚಾಸಾ-3 ಕೊಯಿರಾ ಗ್ರಾಮದವರು ಎಂದರೆ ಸರಿ. ಕೊಯಿರಾ ಗ್ರಾಮವು ನಮ್ಮ ಠಾಣೆಯಿಂದ 2 ಕಿ ಮೀ ಅಂತರದಲ್ಲಿರುತ್ತದೆ. ಘಟನಾ ಸ್ಥಳವು ಚಪ್ಪರದಕಲ್ಲಿನಿಂದ ಜೋತಿಪುರಕ್ಕೆ ಹೋಗುವ ರಸ್ತೆಯಲ್ಲಿ ಬರುತ್ತದೆ ಎಂದರೆ ಸರಿ. ಚಿಕ್ಕಓಬದೇನಹಳ್ಳಿ, ಜೋತಿಪುರ ಮತ್ತು ಮನಗೊಂಡನಹಳ್ಳಿ ಗ್ರಾಮಗಳು ಮಾಯಸಂದ್ರ ಮತ್ತು ಕೊಯಿರಾ ಗ್ರಾಮಕ್ಕಿಂತ ಹತ್ತಿರವಾಗಿರುತ್ತದೆ ಎಂದರೆ ಸರಿ. ಸ್ಥಳದಲ್ಲಿ ಹತ್ತಿರ ಇದ್ದ ಗ್ರಾಮಗಳಿಂದ ಪಂಚರನ್ನು ಕರೆಸಿರುವುದಿಲ್ಲ. ಟ್ರಾಕ್ಟರ್ ನಲ್ಲಿದ್ದ ಮರಳನ್ನು ತಪಾಸಣೆಗಾಗಿ ಮಾದರಿ ತೆಗೆದಿರುವುದಿಲ್ಲ. ನಾನು ಹೇಳುವ ಸ್ಥಳದಲ್ಲಿ ಹೇಳಿದ ಟ್ರಾಕ್ಟರಗಳಲ್ಲಿ ಯಾವುದೇ ಗ್ರಾವೇಲ್

ಮರಳನ್ನು ಆರೋಪಿತರು ತುಂಬಿಕೊಂಡು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ನಿಪಿ-1 ಅನುನ ಸ್ಥಳದಲ್ಲಿ ತಯಾರಿಸಿರುವುದಿಲ್ಲ ಮತ್ತು ಚಾಸಾ-2 ರಿಂದ 4 ರವರು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-2 ಮತ್ತು 3 ರ ಬಾವಚಿತ್ರದ ಕಾಲಕ್ಕೆ ನಾನು ಇರಲಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಟ್ರಾಕ್ಟರ್ ಗಳನ್ನು ರೈತರು ತಮ್ಮ ಜಮೀನುಗಳಿಗೆ ಗೊಬ್ಬರ ಮತ್ತು ಮಣ್ಣನ್ನು ಸಾಗಾಣಿಕೆ ಮಾಡಲು ಬಳಕೆ ಮಾಡುತ್ತಾರೆ ಎಂದರೆ ಸರಿ. ಕೊಯಿರಾ ಮತ್ತು ಮಾಯಸಂದ್ರ ಗ್ರಾಮದಲ್ಲಿ ನಿಲ್ಲಿಸಿರುವ ಟ್ರಾಕ್ಟರ್ ಗಳನ್ನು ತೆಗೆದುಕೊಂಡು ಬಂದು ಸದರಿ ವಾಹನಗಳ ಮೇಲೆ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ಟ್ರಾಕ್ಟರ್ ಗಳಲ್ಲಿ ಇದೆ ಎಂದು ಹೇಳಲಾದ ಗ್ರಾವೇಲ್ ಮರಳನ್ನು ಎಲ್ಲಿಂದ ತೆಗೆದುಕೊಂಡ ಬಂದ ಬಗ್ಗೆ ನಾನು ತನಿಖೆ ಮಾಡಿರುವುದಿಲ್ಲ. ನಮ್ಮ ಠಾಣೆಯ ಅಂಕಿಸಂಖ್ಯೆಗೊಸ್ಕರ ಆರೋಪಿತರ ಮತ್ತು ಅವರ ವಾಹನಗಳ ವಿರುದ್ದ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಎ ಒಪ್ಪಲಾಗಿದೆ.

ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್ ಸಿ.,
ದೇವನಹಳ್ಳಿ.